
## ಏಕಾಗ್ರತೆಯ ಬೆಲೆ



ಒಂದು ಊರಿನಲ್ಲಿ ಇಬ್ಬರು ಅಣ್ಣತಮ್ಮಂದಿರಿದ್ದರು. ಅವರಲ್ಲಿ ಅಣ್ಣನಿಗೆ ಚಿತ್ರ ಬರೆಯುವ ಅಭ್ಯಾಸ. ಒಂದು ದಿನ ಅವನು ಉದ್ಯಾನವನದಲ್ಲಿ ಕುಳಿತು ಚಿತ್ರ ಬಿಡಿಸುತ್ತಿದ್ದ. ಹಸಿರೆಲೆಗಳಿಂದ ಕೂಡಿದ ಒಂದು ಮರದ ಚಿತ್ರವನ್ನು ಬಿಡಿಸಿ ಅದನ್ನು ತಮ್ಮನಿಗೆ ಅವನು ತೋರಿಸಿದನು. ತಮ್ಮ ಅದನ್ನು ಕಂಡು "ಅಣ್ಣಾ , ಇದು ಸರಿಯಾಗಿ ಬಂದಿಲ್ಲ" ಎಂದ.

ಅಣ್ಣನು ಬೇರೆ ಕಾಗದವನ್ನು ತೆಗೆದುಕೊಂಡು ಅದೇ ಚಿತ್ರವನ್ನು ಮತ್ತೆ ಬಿಡಿಸಿದ. ಆಗಲೂ ಅದು ಸರಿಬರಲಿಲ್ಲ ಎಂದೇ ತಮ್ಮನು ಹೇಳಿದ. ಹೀಗೆ ಐದಾರು ಬಾರಿ ಚಿತ್ರ ಬಿಡಿಸಿದ. ಪ್ರತಿಸಲವೂ ತಮ್ಮನಿಗೆ ತೃಪ್ತಿಯಾಗಲಿಲ್ಲ.

ಆಗ ಅಣ್ಣನು ತಮ್ಮನನ್ನು ಕರೆದು, "ನನ್ನ ಬಳಿ ಹಳದಿಯ ಬಣ್ಣವು ತೀರುತ್ತ ಬಂದಿದೆ. ಮನೆಗೆ ಹೋಗಿ ತರುತ್ತೀಯಾ" ಎಂದ. ತಮ್ಮನು ಬಣ್ಣವನ್ನು ತರಲು ಮನೆಯ ಕಡೆಗೆ ಓಡಿದನು.

ಇತ್ತ ಅಣ್ಣನು ಆ ಸಮಯದಲ್ಲಿಯೇ ಮತ್ತೊಮ್ಮೆ ಅದೇ ಚಿತ್ರವನ್ನು ಬಿಡಿಸಿದನು. ಅಷ್ಟು ಹೊತ್ತಿಗೆ ತಮ್ಮನು ಹಿಂತಿರುಗಿದ್ದನು.

ಹಿಂತಿರುಗಿ ಬಂದ ತಮ್ಮನು ಹೊಸದಾಗಿ ಬಿಡಿಸಿದ್ದ ಚಿತ್ರವನ್ನು ಕಂಡು "ಅಣ್ಣಾ, ಇದು ಬಹಳ ಅದ್ಭುತವಾಗಿದೆಯಲ್ಲ, ಇದು ಹೇಗಾಯಿತು ?" ಎಂದು ಅಚ್ಚರಿಗೊಂಡ.

ಅದಕ್ಕೆ ಅಣ್ಣ ಹೇಳಿದ : "ತಮ್ಮಾ, ಏಕಾಗ್ರತೆಯೆ ನಮ್ಮ ಎಲ್ಲ ಕೆಲಸಗಳಿಗೂ ಅತ್ಯಾವಶ್ಯಕ. ನೀನು ನನ್ನ ಪಕ್ಕದಲ್ಲಿ ಇರುವಾಗ ನನ್ನ ಪೂರ್ಣ ಗಮನ ಚಿತ್ರ ಬಿಡಿಸುವತ್ತ ಇರಲಿಲ್ಲ. ಅದಕ್ಕೇ ಆಗ ಬಿಡಿಸಿದ ಚಿತ್ರಗಳು ನಿನಗೆ ತೃಪ್ತಿ ತರಲಿಲ್ಲ. ನೀನು ಅತ್ತ ಹೋದೊಡನೆ ಚಿತ್ರವನ್ನು ಲಕ್ಷ್ಯವಿಟ್ಟು ಬಿಡಿಸಿದೆ. ಅದು ನಿನಗೆ ತೃಪ್ತಿ ತಂದಿತು."

**( ಆಧಾರ : ಒಂದು ಜೆನ್ ಕಿರುಗತೆ )**

ಸಂಗ್ರಹ : **ಡಿ.ವಿ. ಮೋಹನ ಪ್ರಕಾಶ್**